(*b*) Two Girls' High Schools. They are :—

1. Modern Education Society Girls High School,
2. Viswabharath Seva Samithi Girls High School,

These were started during 1972-73 :—

(*c*) —

	Strength	
	Boys	*Girls*
1. Shivaji Vidyalaya High School for Boys. ...	189	...
2. Modern Education Society Girls High School.		25
3. Viswabharath Seva Samithi Girls' High School.		40

ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಲೈಂಗಿಕ ಶಿಕ್ಷಣ

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್, (ಶಿರ್ಸಿ).—

೮. (೧೩).—ವಿದ್ಯಾಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ರಾಜ್ಯದ ಕಾಲೇಜುಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಲೈಂಗಿಕ ಶಿಕ್ಷಣ ಕೊಡಬೇಕೆಂಬ ಸಲಹೆ ಸರಕಾರದ ಪರಿಶೀಲನೆಯಲ್ಲಿದೆಯೇ ;

(ಆ) ಈ ಬಗ್ಗೆ ಸರ್ಕಾರ ಕೈಕೊಂಡ ತೀರ್ಮಾನಗಳೇನು ?

ಶ್ರೀ ಎ. ಆರ್. ಬದರಿನಾರಾಯಣ.—(ವಿದ್ಯಾ ಮಂತ್ರಿಗಳು)

ಉತ್ತರ.– (ಅ). ಇಲ್ಲ.

(ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾಜಿ-ಮಹಾರಾಜರುಗಳ ಅರಮನೆಗಳು

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ).—

೯. (೧೪).—ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ಮೈಸೂರಿನ ಮಾಜಿ–ಮಹಾರಾಜರಿಗೆ ಸೇರಿದ ಮೈಸೂರು, ಬೆಂಗಳೂರು ಮತ್ತು ಉದಕಮಂಡಲದ ಮೂರು ಅರಮನೆಗಳನ್ನು ಮಾರಾಟಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆಯೇ ;

(ಆ) ಈ ಅರಮನೆಗಳು ರಾಜ್ಯ ಸರಕಾರದ ಸ್ವತ್ತು ಮತ್ತು ಅವು ರಾಜ್ಯ ಸರ್ಕಾರದ ಮೇಲುಸ್ತುವಾರಿಯಲ್ಲಿವೆ. ಅವರು ಅವುಗಳನ್ನು ಮಾರಾಟ ಮಾಡಲು ರಾಜ್ಯ ಸರಕಾರದ ಒಪ್ಪಿಗೆಯಿಲ್ಲದೆ ಅವಕಾಶವಿಲ್ಲವೆಂದು ರಾಜ್ಯ ಸರಕಾರಕ್ಕೆ ಮನವಿಗಳು ಬಂದಿವೆಯೇ ;